

# ‘ದೀಪ’ದ ಕಣ್ಣುಗಳಲ್ಲಿ ನಟನೆಯ ಕನಸು

**ಧಾರವಾಡದ ಹುಡುಗಿ ದೀಪಾ ಜಗದೀಶ್, ಶ್ರದ್ಧೆ ಮತ್ತು ಪರಿಶ್ರಮಗಳೇ ತನ್ನನ್ನು ಯಶಸ್ಸಿನ ದಾರಿಯಲ್ಲಿ ನಡೆಸುತ್ತವೆ ಎಂಬ ನಂಬಿಕೆ ಉಳ್ಳವರು. ಕಿರುತೆರೆ ಮತ್ತು ಸಿನಿಮಾ ಎರಡೂ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಇವರಿಗೆ, ತೆರೆಯ ಮೇಲೆ ಬಜಾರಿಯಾಗುವ ಬಯಕೆ ಇದೆಯಂತೆ.**

■ ಪದ್ಮನಾಭ ಭಟ್

‘ಪುನೀತ್ ರಾಜ್‌ಕುಮಾರ್ ಅಂದ್ರೆ ನಂಗೆ ಪ್ರಾಣ. ಅವರ ಸಿನಿಮಾ ನೋಡುತ್ತಲೇ ಬೆಳೆದವಳು. ಅವರನ್ನು ತೆರೆಯ ಮೇಲೆ ನೋಡುತ್ತ, ಅವರ ಜೊತೆಗೆ ನಾನೂ ಒಂದು ಸಿನಿಮಾದಲ್ಲಿ ನಟಿಸಲು ಸಾಧ್ಯವಾಗಿದ್ರೆ ಎಷ್ಟು ಚೆನ್ನಾಗಿರ್ತಿತ್ತಲ್ವಾ ಎಂದು ಕನಸು ಕಾಣುತ್ತಲೇ ನನ್ನೊಳಗೆ ನಟನೆಯ ಆಸೆ ಮೊಳೆತಿದ್ದು’ – ಹೀಗೆನ್ನುವಾಗ ಆ ಹುಡುಗಿಯ ಧ್ವನಿಯಲ್ಲಿ ಪುನೀತ್ ನೆನಪಿನ ಪುಳಕ ಎದ್ದು ಕಾಣುತ್ತಿತ್ತು.

ಕಿರುತೆರೆ ಮತ್ತು ಸಿನಿಮಾ ಎರಡೂ ಕ್ಷೇತ್ರಗಳಲ್ಲಿ ಒಂದೊಂದೇ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗುತ್ತಿರುವ ಆಶಾ ಜಗದೀಶ್ ಧಾರವಾಡದವರು. ಧಾರವಾಡದ ಮಣ್ಣಿನ ಘಮವನ್ನು ಆಸ್ವಾದಿಸುತ್ತಲೇ ಕಲಾಭಿರುಚಿಯನ್ನೂ ಮೈಗೂಡಿಸಿಕೊಂಡವರು. ಬಾಲ್ಯದಲ್ಲಿ ಅವರ ಮನಸಲ್ಲಿದ್ದದ್ದು ಎರಡು ಕನಸುಗಳು. ಒಂದು, ವೆಟರ್ನರಿ ಡಾಕ್ಟರ್ ಆಗಬೇಕು ಎಂಬುದು. ಇನ್ನೊಂದು, ಕನಸು ನಟಿಯಾಗಬೇಕು ಎಂಬುದು. ಈ ಎರಡೂ ಕನಸುಗಳನ್ನು ನನಸು ಮಾಡಿಕೊಳ್ಳಲು ಯತ್ನಿಸುತ್ತಲೇ ಇದ್ದ ಅವರಿಗೆ ಪಿಯುಸಿ ಮುಗಿಯುತ್ತಿದ್ದಂತೆಯೇ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಹಾಗಾಗಿ ಡಾಕ್ಟರ್ ಆಗುವ ಕನಸು ಹಿನ್ನೆಲೆಗೆ ಸರಿಯಿತು.

ಉದಯ ವಾಹಿನಿಯಲ್ಲಿ ಪ್ರಸಾರವಾದ ‘ಮಹಾಸತಿ’ ದೀಪಾ ನಟಿಸಿದ ಮೊದಲ ಧಾರಾವಾಹಿ. ಆ ಧಾರಾವಾಹಿ ಉತ್ತರ ಕರ್ನಾಟಕದ ಭಾಷೆಯಲ್ಲಿಯೇ ಇದ್ದಿದ್ದರಿಂದ ಅದೊಂದು ವರದಾನವೇ ಆಯಿತು. ಆ ಧಾರಾವಾಹಿಯ ನಂತರ ಸುದೀಪ್ ನಿರ್ಮಾಣದ, ಗಡ್ಡ ವಿಜಿ ನಿರ್ದೇಶನದ ‘ವಾರಸ್ದಾರ’ ಧಾರಾವಾಹಿಯಲ್ಲಿಯೂ ನಟಿಸಿದರು. ಆಗಲೇ ಫೇಸ್‌ಬುಕ್‌ನಲ್ಲಿ ದೀಪಾ ಅವರನ್ನು ನೋಡಿದ ನಿರ್ದೇಶನಕ ದಿನೇಶ್ ಬಾಬು ತಮ್ಮ ನಿರ್ದೇಶನದ ‘ಪ್ರೀತಿ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ’ ಸಿನಿಮಾದಲ್ಲಿ ನಟಿಸುವ ಅವಕಾಶ ಕೊಟ್ಟರು. ಆ ಮೂಲಕ ಸ್ಯಾಂಡಲ್‌ವುಡ್‌ಗೂ ಅಡಿಯಿಟ್ಟರು ದೀಪಾ.

ಸದ್ಯ ದೀಪಾ ಗದಗದ

# ಶ್ರುತಿ ಕಮ್‌ಬ್ಯಾಕ್!



ಕಳೆದ ಎರಡು ವರ್ಷಗಳಿಂದ ಬಣ್ಣದ ಬದುಕಿನಿಂದ ದೂರವಿದ್ದ ಶ್ರುತಿ ಹರಿಹರನ್ ಮತ್ತೆ ಕ್ಯಾಮೆರಾ ಎದುರು ಹಾಜರಾಗಿದ್ದಾರೆ. ‘ಮೀ ಟೂ’ ಆಂದೋಲನದಲ್ಲಿ, ತಾವು ಎದುರಿಸಿದ ಲೈಂಗಿಕ ಕಿರುಕುಳದ ಘಟನೆಯನ್ನು ಅವರು 2018ರಲ್ಲಿ ಹಂಚಿಕೊಂಡಿದ್ದರು. ಅದರ ಪರಿಣಾಮವಾಗಿ ಚಿತ್ರರಂಗದಿಂದಲೇ ದೂರವಾಗಬೇಕಾಯ್ತು. ಚಿತ್ರರಂಗದ ಶಕ್ತಿಕೇಂದ್ರಗಳು ಅವರನ್ನು ಚಿತ್ರರಂಗದಿಂದ ಹೊರದಬ್ಬಲು ತೆರೆಮರೆಯಲ್ಲಿ ಇನ್ನಿಲ್ಲದಂತೆ ಯತ್ನಿಸಿದ್ದವು. ಆದರೆ ‘ಇನ್ನೂ ಎಲ್ಲವೂ ಮುಗಿದಿಲ್ಲ’ ಎಂದು ಆಗಾಗ ಹೇಳುತ್ತಲೇ ಬಂದಿದ್ದ ಶ್ರುತಿ ಮತ್ತೀಗ ಹೊಸ ಹುರುಪಿನೊಂದಿಗೆ ಶುರುವಾತು ಮಾಡುತ್ತಿದ್ದಾರೆ.

ಕಳೆದ ಎರಡು ವರ್ಷಗಳನ್ನು ಅವರು ಸಿನಿಮಾಜಗತ್ತಿನಿಂದ ದೂರವಿದ್ದೇ ಕಳೆದಿದ್ದಾರೆ. ಹಾಗೆಂದು ಈ ಬಿಡುವು ಅವರ ಪಾಲಿಗೆ ಒಂದು ದೃಷ್ಟಿಯಿಂದ ವರವಾಗಿಯೇ ಪರಿಣಮಿಸಿದೆ. ತಮ್ಮ ಮಗಳು ಜಾನಕಿಯೊಂದಿಗೆ ಖುಷಿಯ ಕ್ಷಣಗಳನ್ನು ಕಳೆದಿದ್ದಾರೆ. ಈಗ ಅದೇ ಜಾನಕಿಯೊಂದಿಗೇ ಸೆಟ್‌ಗೆ ಬಂದಿದ್ದಾರೆ.